ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.

**CC No.38/2024**

**PW-1 CW-1**

ಸಾಕ್ಷಿದಾರನ ಹೆಸರು ಃ ಚನ್ನಬಸವ

ತಂದೆ ಃ ಭೀಮಪ್ಪ

ವಯಸ್ಸು ಃ 36

ಉದ್ಯೋಗ ಃ ಒಕ್ಕಲುತನ

ವಾಸಸ್ಥಳ ಃ ಮುಷ್ಟೂರು

ಪ್ರಮಾಣಿಕರಿಸಿದ ದಿನಾಂಕ ಃ **19.12.2025**

---

ಮುಖ್ಯವಿಚಾರಣೆ:- ಮಾನ್ಯ ಸಸಅ ರವರಿಂದ

ದಿನಾಂಕ:**16-07-2023** ರಂದು ಶಾಕಪೂರು ಸೀಮೆಯಲ್ಲಿನ ಫಾರ್ಮ ಹೌಸನಲ್ಲಿ **11** ಟಗರು ಮತ್ತು **10** ಹೋತು ಮರಿಗಳು ಇದ್ದು ಅವುಗಳಲ್ಲಿ **1** ಟಗರು ಚಾಸಾ-**6** ದೇವೆಂದ್ರಪ್ಪನಿಗೆ ಸೇರಿದ್ದು ಉಳಿದೇಲ್ಲ ಟಗರು ಮತ್ತು ಹೋತು ನನಗೆ ಸೇರಿದ್ದು ಇದ್ದು ಅವುಗಳನ್ನು ಸಂಜೆ **07:00** ರಿಂದ ಬೆಳಿಗಿನ **06:00** ಗಂಟೆ ಅವಧಿ ಒಳಗೆ ಯಾರೋ ಕಳ್ಳತನ ಮಾಡಿಕೊಂಡು ಹೋಗಿದ್ದು ಆ ಕುರಿತು ನಾನು ಪೊಲೀಸರಿಗೆ ದಿ. **18-07-2023** ರಂದು ದೂರು ನೀಡಿರುತ್ತೇನೆ. ದೂರಿನ ಮೇಲೆ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ದೂರನ್ನು ನಿಪಿ-**1** ಸಹಿಯನ್ನು ನಿಪಿ-**1**(ಎ) ಎಂದು ಗುರುತಿಸಲಾಯಿತು. ಅದೇದಿನ ಸಂಜೆ **05:30** ರಿಂದ **06:30** ರ ಅವಧಿಯಲ್ಲಿ ಪೊಲೀಸರು ನಾನು ತೋರಿಸಿದ ಘಟನಾ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತಾರೆ. ಪುನ: ನನ್ನನ್ನು ದಿನಾಂಕ:**04-08-2023** ರಂದು ಗಬ್ಬೂರು ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಠಾಣೆಯಲ್ಲಿ ಮೂರು ಜನ ಆರೋಪಿತರನ್ನು ತೋರಿಸಿ ಸದರಿಯವರೇ ನಿಮ್ಮ ಟಗರು ಮತ್ತು ಹೋತು ಮರಿಗಳನ್ನು ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಸದರಿ ಆರೋಪಿತರ ಹೆಸರು ಆಂಜನೇಯ್ಯ ತಂದೆ ನರಸಿಂಹ, ಆಂಜನೇಯ್ಯ ತಂದೆ ಹನುಮಂತಾ ಸದರಿ ಇಬ್ಬರದ್ದು ಮುಷ್ಟೂರು ಗ್ರಾಮ ಮತ್ತು ಪಿನುಗೊಂಡ ಗ್ರಾಮದ ಯಲ್ಲನ ಗೌಡ ತಂದೆ ಹನುಮಂತ್ರಾಯ ಎಂದು ತಿಳಿಸಿರುತ್ತಾರೆ. ಸದರಿಯವರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರ ಗುರುತಿಸುವಿಕೆಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ಹೇಳಿರುತ್ತಾರೆ. ಸದರಿ ಆರೋಪಿತರಿಂದ ಅಮಾನತ್ತು ಪಡಿಸಿಕೊಂಡ ರೂ.**75,650/-** ಹಣವನ್ನು ನ್ಯಾಯಾಲಯದ ಆದೇಶದಂತೆ ನಾನು ಸದರಿ ಹಣವನ್ನು ಠಾಣೆಯಿಂದ ಬಿಡುಗಡೆ ಮಾಡಿಕೊಂಡಿರುತ್ತೇನೆ.

ಪಾಟೀ ಸವಾಲು: ಆರೋಪಿ ಪರ ಎಸ್.ಪಿ ವಕೀಲರಿಂದ.

ನಾನು 7 ನೇ ತರಗತಿಯ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಹೇಳಿದಂತೆ ಠಾಣೆಯಲ್ಲಿ ಪೊಲೀಸರು ದೂರನ್ನು ಬರೆದಿರುತ್ತಾರೆ. ದೂರನ್ನು ಪೊಲೀಸರು ನನಗೆ ಓದಿ ಹೇಳಿರುತ್ತಾರೆ. ಫಾರ್ಮ ಹೌಸನ್ನು ಸರ್ಕಾರ ಮಂಜೂರು ಮಾಡಿರುತ್ತದೆ ಅಂದರೆ ಸರಿಯಲ್ಲ. ನಾನು ವೈಯಕ್ತಿಕ ಸಾಲ ಪಡೆದು ಫಾರ್ಮ ಹೌಸ ಕಟ್ಟಿರುತ್ತೇನೆ. ಫಾರ್ಮ ಹೌಸಗೆ ಸಂಬಂಧಿಸಿದ ದಾಖಲೆಗಳನ್ನು ಪೊಲೀಸರಿಗೆ ನೀಡಿಲ್ಲ.ಕಳ್ಳತನ ಆಗುವ ಸಂದರ್ಭದಲ್ಲಿ ಹನುಮೇಶನಿಗೆ ಹುಷಾರು ಇಲ್ಲದ್ದರಿಂದ ನಾನೇ ಮಲಗುತ್ತಿದ್ದೇ ಎಂದು ನುಡಿಯುತ್ತಿದ್ದಾರೆ. ಸದರಿ ಅವಧಿಯಲ್ಲಿ 4-5 ದಿನಗಳ ವರೆಗೆ ಹನುಮೇಶ ಫಾರ್ಮ ಹೌಸ್ ಹತ್ತಿರ ಮಲಗಲು ಬಂದಿರಲಿಲ್ಲ. ಸದರಿ ಅಂಶವನ್ನು ನಾನು ದೂರಿನಲ್ಲಿ ನಮೂಧಿಸಿರುತ್ತೇನೆ. ಕಳ್ಳತನವಾದ ದಿನ ನಾನು ಫಾರ್ಮ ಹೌಸನಲ್ಲಿ ಮಲಗಿರಲಿಲ್ಲ. ಸದರಿ ದಿನ ನನ್ನ ಮಗನಿಗೆ ಹುಷಾರು ಇಲ್ಲದ್ದರಿಂದ ನಾನು ಸಹ ಫಾರ್ಮ ಹೌಸಗೆ ಮಲಗಲು ಹೋಗಿರುವುದಿಲ್ಲ. ಕಳ್ಳತನವಾಗಿರುವ ವಿಚಾರವನ್ನು ದೇವೆಂದ್ರಪ್ಪ ನನಗೆ ತಿಳಿಸಿರುತ್ತಾರೆ. ದೇವೆಂದ್ರಪ್ಪ ಕಳ್ಳನತದ ವಿಷಯ ತಿಳಿಸಿದಾಗ ಬೆಳಿಗಿನ 06:00 ಗಂಟೆ ಯಾಗಿತ್ತು. ದೇವೆಂದ್ರಪ್ಪ ಹೇಳಿದ ನಂತರ ನಾನು ಫಾರ್ಮ ಹೌಸಿಗೆ ಹೋಗಿ ಪರಿಶೀಲನೆ ಮಾಡಿರುತ್ತೇನೆ. ಫಾರ್ಮ ಹೌಸಿಗೆ ಹೋಗಿ ನೋಡಲಾಗಿ ದೇವೆಂದ್ರಪ್ಪ ಹೇಳಿದಂತೆ ಟಗರು ಮತ್ತು ಹೋತು ಮರಿಗಳು ಕಳ್ಳತನವಾಗಿದ್ದು ತಕ್ಷಣ ನಾನು ಹುಡುಕಾಡಲು ಹೋಗಿರುತ್ತೇನೆ. ಆ ದಿನ ನಾನು ದೂರನ್ನು ನೀಡಿಲ್ಲ. ಪೊಲೀಸರು ಆರೋಪಿತರನ್ನು ತೋರಿಸಿದ್ದರಿಂದ ಸದರಿ ಆರೋಪಿತರ ಕಳ್ಳತನ ಮಾಡಿರುತ್ತಾರೆ ಎಂದು ತಿಳಿದುಬಂದಿರುತ್ತದೆ. ಆರೋಪಿತರು ನಮ್ಮ ಗ್ರಾಮದವರಾಗಿದ್ದರಿಂದ ಅವರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಟಗರು ಮತ್ತು ಹೋತುಮರಿಗಳನ್ನು ಖರೀದಿಸಿದ ಬಗ್ಗೆ ದಾಖಲೆಗಳು ಇವೇಯೇ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ದಿನಾಂಕ:16-07-2023 ರಂದು ಸಂಜೆ 07:00 ರಿಂದ ಮರುದಿನ ಬೆಳಿಗ್ಗ 06:00 ಗಂಟೆ ಅವಧಿಯಲ್ಲಿ ನಮ್ಮ ಫಾರ್ಮ ಹೌಸನಲ್ಲಿ ಇರುವ ಟಗರು ಮತ್ತು ಹೋತು ಮರಿಗಳನ್ನು ಯಾರೋ ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ಪೊಲೀಸರಿಗೆ 18-07-2023 ರಂದು ದೂರನ್ನು ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅದೇ ದಿನ ಸಾಯಂಕಾಲ 05:30 ರಿಂದ 06:30 ರ ಅವಧಿಯಲ್ಲಿ ಪೊಲೀಸರು ನಾನು ತೋರಿಸಿದ ಗುನ್ಹೇ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಿನಾಂಕ:04-08-2023 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಆರೋಪಿತರನ್ನು ತೋರಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.